# ವಿಶ್ವವಿದ್ಯಾಲಯದ ಗುರಿ, ಧ್ಯೇಯೋದ್ದೇಶ ಮತ್ತು ಅಧ್ಯಾದೇಶ

## ಗುರಿ:

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ವಿಶ್ವದರ್ಜೆಯ ಕೃಷಿ ವಿಶ್ವವಿದ್ಯಾಲಯವನ್ನಾಗಿ ರೂಪಾಂತರಗೊಳಿಸುವುದು.

## ಧ್ಯೇಯೋದ್ದೇಶ:

ಕೃಷಿ ಮತ್ತು ಕೃಷಿಗೆ ಸಂಬಂಧಿತ ವಿಜ್ಞಾನಗಳಲ್ಲಿ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ವಿಜ್ಞಾನದ ಹೊಸ ಗಡಿರೇಖೆಗಳು ಮತ್ತು ಸಮಕಾಲೀನ ಸವಾಲುಗಳನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಪ್ರಸ್ತುತಪಡಿಸಲು ವಿಶ್ವವಿದ್ಯಾಲಯವು ಶ್ರಮಿಸುತ್ತಿದೆ. ವಿಶ್ವವಿದ್ಯಾಲಯವು ಅತ್ಯುತ್ತಮ ಮಾನವಶಕ್ತಿ ಮತ್ತು ಉಪಯುಕ್ತ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಬದ್ಧವಾಗಿದೆ ಮತ್ತು ಅವುಗಳನ್ನು ರಾಜ್ಯದ ಸಾಮಾನ್ಯ ಕೃಷಿ ಸಮುದಾಯಕ್ಕೆÉ ಪ್ರಸಾರ ಮಾಡುತ್ತದೆ. ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಉತ್ತಮ ಗುಣಮಟ್ಟದ ಮಾನವ ಸಂಪನ್ಮೂಲ ಅಭಿವೃದ್ಧಿ, ಅತ್ಯಾಧುನಿಕ ಸ್ಪರ್ಧಾತ್ಮಕ ತಂತ್ರಜ್ಞಾನಗಳ ಅಭಿವೃದ್ಧಿ ಹಾಗೂ ರಾಜ್ಯ ಮತ್ತು ದೇಶದ ರೈತ ಸಮುದಾಯದ ಸೇವೆಗಾಗಿ ಸಮರ್ಥ ಪ್ರಸಾರ ತಾಂತ್ರಿಕತೆಯನ್ನು ವಿಕಸಿತಗೊಳಿಸುವುದು.

## ಅಧ್ಯಾದೇಶಗಳು:

ವಿಶ್ವವಿದ್ಯಾಲಯದ ಅಧಿನಿಯಮದಲ್ಲಿ ಸೂಚಿತಗೊಂಡಿರುವಂತೆ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧ್ಯಾದೇಶಗಳು ಈ ಮುಂದಿನಂತಿವೆ.

1. ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳ ವಿವಿಧ ವಿಭಾಗಗಳಲ್ಲಿ ಮಾನವ ಸಂಪನ್ಮೂಲ ಗುಣಮಟ್ಟ ಮತ್ತು ಸರ್ವತೋಮುಖ ಅಭಿವೃದ್ಧಿಗಾಗಿ ಶಿಕ್ಷಣ ಒದಗಿಸುವ ವ್ಯವಸ್ಥೆ ಮಾಡುವುದು.

2. ಕಲಿಕೆ ಮತ್ತು ಸಂಶೋಧನೆಗೆ ವಿಶೇಷವಾಗಿ ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳ ಸುಧಾರಣೆಗೆ ಒತ್ತು ನೀಡುವುದು.

3. ವಿಶೇಷವಾಗಿ ರಾಜ್ಯ ಗ್ರಾಮೀಣ ಜನತೆಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳಂತಹ ವಿಷಯಗಳಲ್ಲಿ ವಿಸ್ತರಣಾ ಶಿಕ್ಷಣ ಒದಗಿಸುವುದು.

4. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಶಿಕ್ಷಣ, ಕೈಗಾರಿಕೆಗಳ, ಸಂಶೋಧನೆ ಮತ್ತು ಸಂಸ್ಥೆಗಳಲ್ಲಿ ಪಾಲುಗಾರಿಕೆ ಮತ್ತು ಸಂಬಂಧಗಳನ್ನು ಪ್ರೋತ್ಸಾಹಿಸುವುದು.

5. ಕಾಲಕಾಲಕ್ಕೆ ರಾಜ್ಯ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಇತರ ಕಾರ್ಯಗಳನ್ನು ಕೈಗೊಳ್ಳುವುದು.